


# ಮರಿಸ್ವಾಮಿ ಮಾಡಿದ ತಪ್ಪು

"ಯಾಕೋ ನನ್ನ ಆರೋಗ್ಯ ಸುಧಾರಿಸಿದಲಾಗಾಯ್ತಿನಿಂದಲೂ ನೀನು ಬಹಳ ಖಿನ್ನನಾಗಿರುವಿ? ಏನು ಸಂಗತಿ?" ಎಂದರು ಹಿರಿಸ್ವಾಮಿ. ಅನಿರೀಕ್ಷಿತವೂ ನೇರವೂ ಆದ ಪ್ರಶ್ನೆಗೆ ಮರಿಸ್ವಾಮಿ ತಬ್ಬಿಬ್ಬಾದ. "ಛೇ! ಎಲ್ಲಾದರೂ ಉಂಟೆ? ತಮ್ಮ ಆರೋಗ್ಯ ಸುಧಾರಿಸಿದ್ದಕ್ಕೆ ನನಗೆಷ್ಟು ಸಂತೋಷವಾಗಿದೆಯೆಂದು ನಾನು ಮಾತಿನಲ್ಲಿ ಹೇಳಲಾರೆ, ಸ್ವಾಮಿ. ಕೆಲವು ಸಲ ಅತಿಯಾದ ಸಂತೋಷ ಮನುಷ್ಯನನ್ನು ಮ್ಲಾನವದನನ್ನಾಗಿ ಮಾಡುತ್ತದೆಯೆಂದು ನಾನು ಕೇಳಿದ್ದೇನೆ. ನನಗೂ ಹಾಗೆ ಆಗಿರಬಹುದು. ಅಲ್ಲದೆ..."

"ಅಲ್ಲದೆ ಏನು? ಹೇಳಯ್ಯ, ಅರ್ಧಕ್ಕೆ ಯಾಕೆ ನಿಲ್ಲಿಸಿದೆ?"

"ತಾವು ಹಾಸಿಗೆ ಹಿಡಿದಾಗ ನಾನು ಸಾಕಷ್ಟು ನಿಮ್ಮ ಚಾಕರಿ ಮಾಡಿಲ್ಲವೇ? ಅದರ ಜೊತೆ ಮಠದ ಕೆಲಸ ಕಾರ್ಯಗಳನ್ನೂ ನೋಡಿಕೊಂಡೆ. ಇದೆಲ್ಲದರಿಂದ ನಾನು ಸ್ವಲ್ಪ ಸುಸ್ತಾಗಿದ್ದೇನೆ, ಸ್ವಾಮಿ."